ತನ್ನ ಯಾವತ್ತಿನ ಖುಷಿಯಲ್ಲಿ, ನೆಮ್ಮದಿಯಲ್ಲಿ. ಬಸ್ಸು ಹಿಡಿದು ವಾಪಸು ಮನೆಗೆ ಬರುವಾಗ ಹನ್ನೆರಡರ ಆಸುಪಾಸು. ಡೋರ್‌ಲಾಕ್‌ನ ಮೂರು ಕೀಗಳಲ್ಲಿ ಒಬ್ಬೊಬ್ಬರ ಹತ್ತಿರ ಒಂದೊಂದು ಇಟ್ಟುಕೊಳ್ಳುವ ವ್ಯವಸ್ಥೆ. ಯಾರು ಯಾವಾಗ ಮನೆಗೆ ಬಂದರೂ ಮತ್ತೊಬ್ಬರಿಗೆ ಕಾಯಬೇಕಾದ ಅಗತ್ಯ ಇಲ್ಲ. ಬ್ಯಾಗಿನಲ್ಲಿದ್ದ ಕೀ ಹುಡುಕಿ ಅವಳು ಬಾಗಿಲು ತೆಗೆಯುವುದಕ್ಕೂ, ಆ ಸಣ್ಣ ಸದ್ದು ಕಿವಿಗೆ ಬಿದ್ದಿದ್ದರ ಪ್ರತಿಕ್ರಿಯೆಯೋ ಎಂಬಂತೆ ಮನೆಯ ಸುತ್ತು ಕೆಲಸಕ್ಕೆ ಬರುತ್ತಿದ್ದ ಸರೋಜ ಚಿದಾನಂದನ ಕೋಣೆಯಿಂದ ಹೊರಗೆ ಧಾವಿಸಿ ಬರುವುದಕ್ಕೂ ಸಮಸಮ. ಇಷ್ಟು ಹೊತ್ತಿನಲ್ಲಿ ಇವಳು ಇಲ್ಲಿ ಯಾಕೆ?

ಬೆಳಿಗ್ಗೆ ಬೇಗ ಕೆಲಸಕ್ಕೆ ಬಂದು, ಎಲ್ಲರೂ ಮನೆಯಿಂದ ಹೊರಡುವ ಮುನ್ನ ಕೆಲಸ ಮುಗಿಸಿ ಹೋಗುವಾಕೆ ಮತ್ತ್ಯಾಕೆ ಬಂದಳು? ಚಿಕ್ಕ ಹುಡುಗಿಯೇನಲ್ಲ ಭಾಮ.

ಕೋಣೆಯೊಳಗಿನಿಂದ ಅಪ್ಪ ನಿಧಾನಕ್ಕೆ ಹೊರಗೆ ಬರುತ್ತಿದ್ದಂತೆ ಈ ಮನೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಸ್ಪಷ್ಟವಾಗಿ ಅವಳ ಮುಖ ಕಪ್ಪಿಟ್ಟಿತು. ಕೆಲವೊಂದು ಘಟನೆಗಳು ಹೀಗೇ. ತಪ್ಪು ಮಾಡಿ ಸಿಕ್ಕಿ ಬಿದ್ದವರಿಗಿಂತ ಹೆಚ್ಚಿನ ಮುಜುಗರ ಆ ತಪ್ಪಿಗೆ ಸಾಕ್ಷಿಯಾದವರಿಗೆ ಉಂಟಾಗಿ ಬಿಡುತ್ತದೆ, ಹೋಗಬಾರದ ಹೊತ್ತಿನಲ್ಲಿ ಹೋಗಬಾರದ ಜಾಗಕ್ಕೆ ಹೋದ ಹಾಗೆ.

‘ಇಷ್ಟು ಬೇಗ ಕಾಲೇಜು ಮುಗೀತಾ ಪುಟ್ಟಿ? ಬೇಗ ಬಂದ್ಬಿಟ್ಟಿದ್ದಿ...’ ಏನೂ ಆಗದವರಂತೆ ಸಹಜವಾಗಿ ವಿಚಾರಿಸಿದ್ದ ಚಿದಾನಂದ. ಮಾತಾಡಿರಲಿಲ್ಲ ಭಾಮ. ಹೀಗೆ ತಾನು ಅನಿರೀಕ್ಷಿತವಾಗಿ ಬರುತ್ತೇನೆಂದು ಮೊದಲೇ ಗೊತ್ತಿದ್ದಿದ್ದರೆ ಒಳಗಿನ ಅಗುಳಿಯನ್ನೆಳೆದು ಬಾಗಿಲನ್ನು ಭದ್ರಪಡಿಸಿಕೊಳ್ಳುತ್ತಿದ್ದರೇನೋ. ಸಮಯ ಸಿಕ್ಕಿದ್ದರೆ ಹಿಂಬಾಗಿಲಿನಿಂದ ಪರಾರಿಯಾಗುವ ಅವಕಾಶವೂ ಇರುತ್ತಿತ್ತು. ಭಾಮ ಬಾಯ್ಬಿಟ್ಟು ಏನೂ ಕೇಳದೆ, ಏನೂ ಹೇಳದೆ ಚಿದಾನಂದನಿಂದ ವಿವರಣೆ ಬಂತು.

‘ಸರೋಜನ ಮಗಂಗೆ ಹುಷಾರಿಲ್ವಂತೆ ಕಣೇ. ಆಸ್ಪತ್ರೆಗೆ ಸೇರ್ಸಿದಾರಂತೆ. ಅರ್ಜೆಂಟಾಗಿ ಒಂದಿಷ್ಟು ದುಡ್ಡು ಬೇಕಿತ್ತು ಅಂತ ಓಡಿ ಬಂದಿದಾಳೆ.’

ಇಷ್ಟು ಹೊತ್ತಿಗೆ ಅಪ್ಪ ಮನೆಯಲ್ಲಿರುವುದಿಲ್ಲ ಎಂದು ಇವಳಿಗೆ ಗೊತ್ತಿಲ್ಲವೇ? ದುಡ್ಡು ಬೇಕಿದ್ದರೆ ಬ್ಯಾಂಕಿಗೆ ಹೋಗಿ ಕೇಳುತ್ತಿದ್ದಳು ಎಂದು ಭಾಮನಿಗೆ ಅನಿಸಿಯೇ ಅನಿಸಿತು. ಎಷ್ಟು ಚೆನ್ನಾಗಿ ಸುಳ್ಳಿನ ಮಾಲೆ ಪೋಣಿಸುತ್ತಿದ್ದಾರೆ ಅಪ್ಪ. ಅವಳ ಮನಸ್ಸನ್ನು ಓದಿದವನಂತೆ ಮತ್ತೆ ಹೇಳಿದ ಚಿದಾನಂದ,

‘ಬ್ಯಾಂಕಿಗೆ ಹೋಗಿದ್ಲಂತೆ ಕಣೇ. ನಂಗ್ಯಾಕೋ ವಿಪರೀತ ತಲೆನೋವು ಶುರುವಾಗಿತ್ತು. ಕೆಲಸ ಮಾಡೋಕೆ ಸಾಧ್ಯಾನೇ ಇಲ್ಲ ಅಂತ ರಜಾ ಹಾಕಿ ಮನೆಗೆ ಬಂದಿದ್ದೆ. ಅದಕ್ಕೇಂತ್ಲೇ’.

ಹೌದಾ? ಇರಬಹುದಾ? ಮನೆಯುಡುಗೆಯಲ್ಲಿದ್ದಾರೆ ಅಪ್ಪ. ಎಲ್ಲಾ ಒಪ್ಪೋಣ. ದುಡ್ಡು ಕೇಳಲು ಬಂದವಳು ಸೀದಾ ಯಜಮಾನರ ರೂಮಿಗೆ ಹೋಗುತ್ತಾಳಾ? ಮುಂಬಾಗಿಲು ಮುಚ್ಚಿಕೊಳ್ಳುವ ಪ್ರಮೇಯ ಏನಿತ್ತು? ಮಗಳು ಇನ್ನೂ ಸಣ್ಣ ಹುಡುಗಿ ಎಂಬಂತೆ ಸಮಜಾಯಿಷಿ ಹೇಳುತ್ತಿರಬಹುದು ಅಪ್ಪ. ಆದರೆ ಬಾಯಲ್ಲಿ ಬೆರಳಿಟ್ಟರೆ ಕಚ್ಚಲು ಬರದಷ್ಟು ಮುಗ್ಧೆ ತಾನಲ್ಲ. ಕುಡಿತ ಹೆಚ್ಚಾಗಿ, ಲಿವರ್ ಕೆಟ್ಟು ಪರಲೋಕ ಸೇರಿಕೊಂಡಿದ್ದನಂತೆ ಸರೋಜನ ಗಂಡ. ಎರಡು ಸಣ್ಣ ಮಕ್ಕಳನ್ನು ಸಾಕಲು ಬೆಳಗಿಂದ ರಾತ್ರಿಯವರೆಗೆ ರಕ್ತ ನೀರು ಮಾಡಿಕೊಂಡು ಕಂಡವರ ಮನೆಯ ಕಸಮುಸುರೆ ಮಾಡುತ್ತಿದ್ದ ಸರೋಜ ಅಂದರೆ ಭಾಮನ ಮನಸ್ಸಿನಲ್ಲಿ ಕನಿಕರದ ಭಾವನೆಯಿತ್ತು. ಬೆಳಗಿನ ಅವಸರದಲ್ಲೂ ಅವಳಿಗೆ ಕಾಫಿ, ತಿಂಡಿ ಸರಬರಾಜು ಮಾಡುವುದನ್ನು ತಪ್ಪಿಸಿದವಳಲ್ಲ ಭಾಮ.

‘ಪಾಪ, ಬೆಳಿಬೆಳಿಗ್ಗೇನೇ ಖಾಲಿ ಹೊಟ್ಟೇಲಿ ಓಡಿ ಬಂದಿರ್ತಾಳೆ. ನಾವು ತಿನ್ನೋದ್ರಲ್ಲಿ ಒಂದು ತುತ್ತು ಕೊಟ್ರೆ ನಮಗೇನು ಕಮ್ಮಿಯಾಗಲ್ಲ...’ ಸಪೋರ್ಟಿನ ಮಾತಾಡುತ್ತಿದ್ದ ಅಪ್ಪ. ಈ ಕನಿಕರದ ಹಿಂದೆ ಬೇರಿನ್ನೇನೋ ಭಾವನೆ ಇರಬಹುದೆಂದು ಊಹಿಸಿದವಳಲ್ಲ ಹುಡುಗಿ. ಅಪ್ಪನ ಮಗ್ಗುಲಲ್ಲಿ ಸರೋಜನನ್ನು ಕಲ್ಪಿಸಿಕೊಂಡು ಅವಳಿಗೆ ಮೈಯಿಡೀ ಹೀಕರಿಸಿದಂತಾಗಿತ್ತು. ‘ಹಸಿವಾದರೂ ಹುಲಿ ಹುಲ್ಲು ತಿನ್ನುವುದಿಲ್ಲ’ ಎನ್ನುವುದು ಗಾದೆ ಮಾತು. ‘ಹಸಿದವನಿಗೆ ಹಳಸಿದ್ದೂ ಮೃಷ್ಟಾನ್ನ’ ಅನ್ನುವುದೂ ಗಾದೆ. ಅಪ್ಪ ಇಷ್ಟು ಕೀಳುಮಟ್ಟಕ್ಕಿಳಿಯುವ ಬದಲು ಮತ್ತೊಂದು ಮದುವೆಯಾಗಿದ್ದಿದ್ದರೇ ಚೆನ್ನಾಗಿರುತ್ತಿತ್ತೇನೋ...

‘ಯಾಕೆ ಮಾತೇ ಆಡ್ತಿಲ್ಲ? ನೀನ್ಯಾಕೆ ಬೇಗ ಬಂದಿದ್ದು?’ ಕೇಳುತ್ತಿದ್ದಾನೆ ಚಿದಾನಂದ. ಈ ನಡುವೆ ‘ಬರ್ತೀನಿ ಅಣ್ಣಾ’ ಎನ್ನುತ್ತಾ ಜಾಗ ಖಾಲಿ ಮಾಡಿ ಹೊರಟು ಹೋಗಿದ್ದಳು ಸರೋಜ.

‘ಅಣ್ಣಾ’ ಎಂದು ಬಾಯಿ ತುಂಬಾ ಕರೆಯುತ್ತಿದ್ದವರೊಡನೆ ಈ ಪರಿಯ ನಡವಳಿಕೆಯೇ? ಆ ಶಬ್ದಕ್ಕೇ ಅವಮಾನ ಮಾಡಿದ ಹಾಗೆ? ಅಥವಾ ತಾನೆಂದುಕೊಂಡಂತೆ ಏನೂ ಆಗಿಲ್ಲವಾ? ಅಪ್ಪ ಹೇಳುತ್ತಿರುವುದು ನಿಜವಾ? ಅಪ್ಪ, ತನ್ನಪ್ಪ, ಮಕ್ಕಳಿಗೆ ಕಷ್ಟವಾಗಬಾರದೆಂದು ಮತ್ತೊಂದು ಮದುವೆಯ ಬಗ್ಗೆ ಯೋಚನೆ ಕೂಡ ಮಾಡದ ಅಪ್ಪ ಹೀಗೆ ನಡೆದುಕೊಂಡರೇ? ಅಸಾಧ್ಯ ಅನ್ನುತ್ತಿದೆ ಇಡೀ ಜೀವ.

‘ನಡಿ, ಕೈಕಾಲು ತೊಳ್ಕಂಬಾ. ಊಟ ಮಾಡೋಣ...’ ಅನ್ನುತ್ತಿದ್ದಾರೆ ಅಪ್ಪ. ಭಾಮ ಮಾತಿಲ್ಲದೆ ತನ್ನ ಕೋಣೆ ಹೊಕ್ಕಳು. ಅವಳು ಕೈಕಾಲು ತೊಳೆದು ಬರುವಷ್ಟರಲ್ಲಿ ಅವಳ ಬ್ಯಾಗಿನಲ್ಲಿದ್ದ ಟಿಫನ್ ಕ್ಯಾರಿಯರ್ ತೆಗೆದು ಡೈನಿಂಗ್ ಟೇಬಲಿನ ಮೇಲಿಟ್ಟು ಊಟಕ್ಕೆ ಅಣಿಗೊಳಿಸಿದ್ದ ಚಿದಾನಂದ. ತನ್ನ ಸಂದೇಹ ನಿಜವಾಗಿದ್ದರೆ ಅಪ್ಪನಿಗೆ ಪಾಪಪ್ರಜ್ಞೆಯೋ, ಮುಜುಗರವೋ, ಎಂತದೋ ಒಂದು ಕಾಡಬೇಕಿತ್ತು. ತನ್ನ ಕಣ್ಣುಗಳೇ ತನಗೆ ಮೋಸ ಮಾಡಿದುವೇ? ತಾನೆಂದುಕೊಂಡಂತೆ ಏನೂ ಆಗಿಲ್ಲವೇ? ಭ್ರಮೆ?

‘ಬಾ’ ಅಂದ ಚಿದಾನಂದ, ತಾನೂ ಊಟಕ್ಕೆ ಕೂರಲು ಸಿದ್ಧನಾಗಿ. ಭಾಮ ಯಾಂತ್ರಿಕವಾಗಿ ಅಪ್ಪನ ಕರೆಗೆ ಓಗೊಟ್ಟಳು.

‘ಬೇಗ ಬಂದಿದ್ದಿ. ಯಾಕೆ ಅಂತ ಕೇಳಿದ್ರೆ ಮಾತಾಡ್ತಿಲ್ಲ. ಅದೇನಾಯ್ತೂಂತ ಹೇಳೇ...’ ಚಿದಾನಂದ ಅವಳ ಹತ್ತಿರ ಬಂದು ತಲೆ ನೇವರಿಸಿದ್ದಷ್ಟೇ ಗೊತ್ತು, ಭಾಮ ಟೇಬಲಿನ ಮೇಲೆ ತಲೆ ಇಟ್ಟು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಚಿದಾನಂದ ಗಾಬರಿಗೊಂಡ. ಅವಳ ಭುಜ ಹಿಡಿದು ಗಲಗಲ ಅಲುಗಿಸಿದ. ‘ಏನಾಯ್ತೇ? ಮಾತಾಡೇ’ ಅಂದವನ ದನಿಯಲ್ಲಿ ಹುದುಗಿದ್ದ ಪ್ರೀತಿಯ ಮಹಾಪೂರ ಭಾಮನ ಅಂತರಂಗವನ್ನು ಹೊಕ್ಕು ಅವಳ ಅಳು ಪರಾಕಾಷ್ಠೆಯ ಹಂತಕ್ಕೆ ತಲುಪಿತು.

‘ಏನಾದ್ರೂ ಆಯ್ತಾ? ಪೋಲಿ ಹುಡುಗರು...’ ಮುಂದೆ ಮಾತಾಡಲಾಗದೆ ಚಿದಾನಂದ ಅರ್ಧೋಕ್ತಿಯಲ್ಲಿ ಮಾತು ನಿಲ್ಲಿಸಿದ.

‘ಊಹೂಂ...’ ಅನ್ನುವಂತೆ ಅಡ್ಡಡ್ಡ ತಲೆ ಆಡಿಸಿದಳು ಹುಡುಗಿ.

‘ಮತ್ತ್ಯಾಕೆ ಅಳ್ತಿದ್ದಿ?’

‘...’

‘ಬಾಯಿ ಬಿಡದಿದ್ರೆ ಎರಡು ಬಿಗೀತೀನಿ ನೋಡು...’ ಯಾವತ್ತೂ ಇಂಥ ಗದರಿಕೆಯ ಮಾತಾಡದ ಅಪ್ಪನ ಮುಖವನ್ನು ಭಾಮ ಅದ್ಯಾವ ಪರಿಯಲ್ಲಿ ದಿಟ್ಟಿಸಿದಳು ಅಂದರೆ ಈ ಮಾತಾಡುತ್ತಿರುವುದು ತನ್ನ ಪ್ರೀತಿಯ ಅಪ್ಪನಾ? ಎನ್ನುವ ಅಪನಂಬುಗೆ ಅವಳ ಕಣ್ಣುಗಳಲ್ಲಿ ಸ್ಪಷ್ಟವಾಗಿ ಗೋಚರಿಸಿ ಚಿದಾನಂದ ಮೃದುವಾದ.

‘ಹೇಳು ಕಂದಾ, ಏನಾಯ್ತು ಹೇಳು. ಯಾಕೆ ಬೇಗ ಬಂದಿ ಅಂತ ನನ್ನ ಹತ್ರ ಹೇಳು...’

ಇಲ್ಲ. ತನಗೆ ತಪ್ಪು ತಿಳಿವಳಿಕೆಯಾಗಿದೆ. ವೃಥಾ ಅಪ್ಪನನ್ನು ದೋಷಿಯಾಗಿಸಿ ನೋಡುತ್ತಿದ್ದೇನೆ ತಾನು. ತಪ್ಪು ಮಾಡಿದವರು ಹೀಗೆ ನಿಸ್ಸಂಕೋಚವಾಗಿ, ನಿರಾಳವಾಗಿ ಮಾತಾಡಲು ಸಾಧ್ಯವೇ? ಅಲ್ಲದೆ ಬಾಗಿಲನ್ನು ಅಗುಳಿ ಹಾಕಿ ಇನ್ನಷ್ಟು ಭದ್ರಪಡಿಸಿಕೊಳ್ಳುವ ಸಾಧ್ಯತೆ ಇದ್ದರೂ ಅಷ್ಟು ಜಾಗ್ರತೆ ವಹಿಸಿಲ್ಲ ಅಂದರೆ ಅದೇನು ಆತುರದ ಮೈಮರೆವೋ ಅಥವಾ ನಿರಪರಾಧಿತ್ವದ ಸೂಚನೆಯೋ? ಗೊಂದಲದ ಜೊತೆ ಒಂದಲ್ಪ ಸಮಾಧಾನದ ಅನುಭವ.

‘ಮ್ಯಾನೇಜಿಂಗ್ ಕಮಿಟಿಯವರೊಬ್ರು ತೀರ್ಕೊಂಡ್ರು ಅಪ್ಪಾ. ಅದಕ್ಕೇ ರಜಾ ಕೊಟ್ಟಿದಾರೆ.’

‘ಅಷ್ಟೇನಾ’ ಚಿದಾನಂದ ನಿಡಿಯುಸಿರೆಳೆದ, ‘ಯಾರೋ ಸತ್ತಿದ್ದಕ್ಕೆ ಹೀಗೆ ಅಳ್ತಾರೇನೇ? ಹುಚ್ಚಿ ಎಲ್ಲೋ. ಮೂಗು ನೋಡು, ಕೆಂಪು ದೊಣಮೆಣಸಿನ ಹಾಗೆ ಕಾಣ್ತಿದೆ...’ ಮಗಳ ಮೂಗು ಹಿಡಿದು ಮುದ್ದು ತೋರಿಸಲು ಹೊರಟ ಚಿದಾನಂದ.

‘ಥೂ, ಸಿಂಬಳ...’ ಎಂದು ನಗೆಚಾಟಿಕೆ ಮಾಡುತ್ತಾ ಕೈಗಂಟಿದ ಮಗಳ ಸಿಂಬಳವನ್ನು ಉಟ್ಟ ಲುಂಗಿಗೆ ವರೆಸಿಕೊಂಡ.

‘ಥೂ, ಅಸಂಯ್ಯ, ಕೈ ತೊಳ್ಕೊಂಡು ಬಾ...’ ಅನ್ನಬೇಕೆಂದು ಭಾಮನಿಗೆ ಅನಿಸಿತು ಅಂದರೆ ಅವಳು ಅಪ್ಪನ ಮೇಲಿನ ಸಂಶಯವನ್ನು ಸದ್ಯಕ್ಕೆ ಬದಿಗಿಟ್ಟು ಅವನನ್ನು ನಂಬಿದಳು ಎನ್ನಬೇಕೇ? ಸದ್ಯಕ್ಕೆ ಅನ್ನುವುದನ್ನು ಮರೆಯದೆ ಹೀಗೆ ಅರ್ಥೈಸಿಕೊಳ್ಳಬೇಕು.

***

(ಸಶೇಷ)